# ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ

# ಕಿರುಚಿತ್ರ ಹಬ್ಬ

**ವಿಳಾಸ:** ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ, ಕೇಂದ್ರ ಕಛೇರಿ, ಶಾಂತಿನಗರ,
ಸಾರ್ವಜನಿಕ ಸಂಪರ್ಕ ಇಲಾಖೆ, ಬೆಂಗಳೂರು-27
**ಇ-ಮೇಲ್**:nammabmtc@mybmtc.com, ಮೊ: 7760991212

# ಕಿರು ಚಿತ್ರ ಹಬ್ಬ 2020

**ವಿವರ:** ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ ವತಿಯಿಂದ ಸಾರ್ವಜನಿಕ ಪ್ರಯಾಣಿಕರಿಗೆ ಕಿರು ಚಿತ್ರ ಹಬ್ಬದ ಉತ್ಸವಕ್ಕೆ ಅರ್ಜಿಯನ್ನು ಆಹ್ವಾನಿಸುತ್ತಿದ್ದೆ. ಆಸಕ್ತರು ಸಂಸ್ಥೆಯು ನೀಡುವ ಪರಿಕ್ಪಲನೆಯನ್ನು ಬಳಸಿಕೊಂಡು ಕಿರುಚಿತ್ರವನ್ನು ತಯಾರಿಸಬೇಕಾಗಿರುತ್ತದೆ.

- ಕಿರುಚಿತ್ರದ ಅವಧಿಯು 2-3 ನಿಮಿಷವಿರಬೇಕು
- ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ 20-02-2020
- ಬಹುಮಾನ: 3 ವಿಭಾಗಲ್ಲಿನ ವಿಜೇತರರಿಗೆ ತಲಾ ಒಂದು ತಿಂಗಳ ಉಚಿತ ವೋಲ್ವೋ ಮಾಸಿಕ ಪಾಸು

**ಕಿರುಚಿತ್ರ ಸ್ಪರ್ಧೆಗೆ ನಿಯಮಗಳು :**

ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಗೆ ನೀಡುವ ಪರಿಕಲ್ಪನೆಗಳ ಮೇಲೆ ಕಿರುಚಿತ್ರ ನಿರ್ಮಿಸುವುದು.

- ಸಮೂಹ ಸಾರಿಗೆ ಬಳಕೆ
- ಪ್ರತ್ಯೇಕ ಬಸ್ ಪಥದ ಬಗ್ಗೆ
- ನಿರ್ಭಯ ಯೋಜನೆಯ ಬಗ್ಗೆ

**ಕಿರುಚಿತ್ರ ಸ್ಪರ್ಧೆಯ ಗುರಿ :**

ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯ ವಿಶಿಷ್ಟ ಸೇವೆಗಳನ್ನು ಪ್ರದರ್ಶಿಸುವಂತಹ ಕಿರುಚಿತ್ರವನ್ನು ನಿರ್ಮಿಸುವುದು. ಇಂತಹ ಕಿರುಚಿತ್ರ ಕೆಳಕಂಡಂತಹ ಅಂಶಗಳನ್ನು ಒಳಗೊಂಡಿರಬೇಕು:

- ನಮ್ಮ ಬೆಂಗಳೂರು ಮತ್ತು ನಮ್ಮ ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ ಎಂಬ ಭಾವನೆ ಒಳಗೊಂಡಿರಬೇಕು
- ಮಹಿಳೆ ಮಕ್ಕಳು ಮತ್ತು ಎಲ್ಲಾ ರೀತಿಯ ಪ್ರಯಾಣಿಕರಿಗೆ ಸುರಕ್ಷಿತ ಸಾರಿಗೆ ಎಂಬ ಭಾವನೆ ಮೂಡುವಂತಿರಬೇಕು
- ಪ್ರತಿದಿನ 45 ಲಕ್ಷ ಪ್ರಯಾಣಿಕರು ಬೆಂ.ಮ.ಸಾ. ಸಂಸ್ಥೆಯ ಸೇವೆಯನ್ನು ಬಳಸಿಕೊಳ್ಳುತ್ತಿರುವ ಬಗ್ಗೆ
- ಪರಿಸರಸ್ನೇಹಿ ಬಸ್ಸುಗಳು, ಮಾಲಿನ್ಯವನ್ನು ತಗ್ಗಿಸುವ ನಿಟ್ಟಿನಲ್ಲಿ ಮಹತ್ತರ ಪಾತ್ರ ವಹಿಸುತ್ತಿರುವ ಬಗ್ಗೆ
- ನಮ್ಮ ಬೆಂಗಳೂರಿನ ಸೊಬಗನ್ನು ಅನಾವರಣಗೊಳಿಸುವಂತಿರಬೇಕು.
- ಬೆಂಮಸಾಸಂಸ್ಥೆಯಿಂದ ಒದಗಿಸಿರುವ ಸೇವೆಗಳ ಬಗ್ಗೆ.

**ಪ್ರವೇಶಾತಿ ಸಲ್ಲಿಕೆಗೆ ನಿರ್ದಿಷ್ಟ ನಿಯಮಗಳು:**

- ಕಿರುಚಿತ್ರ ಸ್ಪರ್ಧೆಯು ಬೆಂ.ಮ.ಸಾ.ಸಂಸ್ಥೆಯ ಷರತ್ತು ಮತ್ತು ನಿಬಂಧನೆಗಳಿಗೆ ಒಳಪಟ್ಟಿರುತ್ತದೆ.
- ಕಿರುಚಿತ್ರದಲ್ಲಿ ಯಾವುದೇ ರಾಜಕೀಯ, ಧಾರ್ಮಿಕತೆಯ ವಿಷಯವಾಗಲೀ, ಜಾಹೀರಾತುಗಳಾಗಲಿ ಇರಕೂಡದು.
- ಕಿರುಚಿತ್ರ ನಿರ್ಮಾಣವು ಸ್ವಂತದ್ದಾಗಿರಬೇಕು, ಎರವಲು ಅಥವಾ ನಕಲಾಗಿರಬಾರದು, ಹಕ್ಕುಸ್ವಾಮ್ಯದ ಉಲ್ಲಂಘನೆ ಮಾಡಿರುವುದು ಕಂಡುಬಂದಲ್ಲಿ ಅಂತಹ ಪ್ರವೇಶಾತಿಗಳನ್ನು ಅನರ್ಹಗೊಳಿಸಲಾಗುವುದು.

- ಕಿರುಚಿತ್ರವು ಸಾಮಾನ್ಯ ವೀಡಿಯೋ ಫಾರ್ಮೆಟ್‌ನಲ್ಲಿರಬೇಕು.
- ಬೆಂಮಸಾಸಂಸ್ಥೆಯ ಅನುಮತಿ ಇಲ್ಲದೆ ಯಾವುದೇ ಮಾಧ್ಯಮಗಳಲ್ಲಿ ಪ್ರದರ್ಶಿಸಬಾರದು.
- ಈ ಕಛೇರಿಗೆ ಸಲ್ಲಿಸಿದ ಕಿರುಚಿತ್ರಗಳು ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯ ಒಡೆತನಕ್ಕೆ ಸೇರಿರುತ್ತವೆ.
- ಕಿರುಚಿತ್ರ ಚಿತ್ರೀಕರಣದ ಸಮಯದಲ್ಲಿ ಭದ್ರತೆ & ಮುಂಜಾಗ್ರತೆಯನ್ನು ತಾವೇ ನಿರ್ವಹಿಸಿಕೊಳ್ಳುವುದು.
- ಸ್ಪರ್ಧೆಗೆ ಭಾಗವಹಿಸುವ ಸ್ಪರ್ಧಾಳುಗಳು ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯ ವೆಬ್‌ಸೈಟ್ ನಿಂದ ಅರ್ಜಿನಮೂನೆಯನ್ನು ಮತ್ತು ಸಂಬಂಧಿಸಿದ ಮಾಹಿತಿಯನ್ನು ಡೌನ್‌ಲೋಡ್ ಮಾಡಿಕೊಳ್ಳುವುದು.
- ಕಿರುಚಿತ್ರ ತಯಾರಿಕೆಗೆ ಈ ಕಛೇರಿಯಿಂದ ಯಾವುದೇ ಉಪಕರಣಗಳನ್ನು ನೀಡುವುದಿಲ್ಲ.
- ಕಿರುಚಿತ್ರದ ಆಯ್ಕೆ/ತಿರಸ್ಕೃತದ ಅಂತಿಮ ನಿರ್ಧಾರ ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯ ತೀರ್ಮಾನಕ್ಕೆ ಒಳಪಟ್ಟಿರುತ್ತದೆ.
- ವಿಜೇತರ ಆಯ್ಕೆಯಲ್ಲಿ ಬೆಂಮಸಾಸಂಸ್ಥೆಯ ತೀರ್ಮಾನವೇ ಅಂತಿಮವಾಗಿರುತ್ತದೆ.
- ಆಯ್ಕೆಯಾಗುವ ಕಿರುಚಿತ್ರದ ಮೇಲೆ ಬೆಂಮಸಾಸಂಸ್ಥೆಯು copy right ನ ಹಕ್ಕನ್ನು ತೆಗೆದುಕೊಳ್ಳುವ ಅಧಿಕಾರ ಹೊಂದಿರುತ್ತದೆ.
- ಸ್ಪರ್ದೆಗೆ ದಾಖಲಿಸಲು ಕೊನೆಯ ದಿನಾಂಕ: 28.02.2020
- ಕಿರುಚಿತ್ರದಲ್ಲಿ ತಮ್ಮ ಸಂಸ್ಥೆಯ ಹೆಸರಾಗಲಿ ಅಥವಾ ತಮ್ಮ ಹೆಸರಾಗಲಿ ಹಾಕಕೂಡದು.
- ಕಿರುಚಿತ್ರ ತಯಾರಿಸಿ ಕಛೇರಿಗೆ ಸಲ್ಲಿಸಲು ಕೊನೆಯ ದಿನಾಂಕ:20.03.2020
- ಒಬ್ಬ ವ್ಯಕ್ತಿ/ಸಂಸ್ಥೆ/ಮಾಧ್ಯಮದವರಿಗೆ ಒಂದು ಪ್ರವೇಶಕ್ಕೆ ಮಾತ್ರ ಅವಕಾಶವಿರುತ್ತದೆ.

**ಪರಿಕಲ್ಪನೆಯ ವಿವರಗಳು:-**

- ನಿರ್ಭಯ ಯೋಜನೆಯ ಬಗ್ಗೆ: ಮಹಿಳಾ ಪ್ರಯಾಣಿಕರ ಸುರಕ್ಷತೆಯು ಬೆಂ.ಮ.ಸಾ.ಸಂಸ್ಥೆಯ ಮೊದಲ ಆದ್ಯತೆಯಾಗಿದೆ. ಮಹಿಳಾ ಪ್ರಯಾಣಿಕರ ಸುರಕ್ಷತೆಯನ್ನು ಸುಧಾರಿಸಲು ಅನೇಕ ಉಪಕ್ರಮಗಳನ್ನು ಜಾರಿಗೆ ತರುವಲ್ಲಿ ಭಾರತದ ಪ್ರವರ್ತಕವಾಗಿದೆ. ಸುರಕ್ಷತೆಯನ್ನು ಸುಧಾರಿಸಲು ಇಂತಹಾ ವ್ಯಾಪಕವಾದ ವ್ಯವಸ್ಥೆಗಳು ಮತ್ತು ಕಾರ್ಯಕ್ರಮಗಳನ್ನು ಹೊಂದಿರುವ ಭಾರತದ ಏಕೈಕ ಎಸ್ ಟಿಯು ಆಗಿರುತ್ತದೆ. ಈಗಾಲೇ ಬೆಂ.ಮ.ಸಾ.ಸಂಸ್ಥೆಯು ಹಲವಾರು ಉಪಕ್ರಮಗಳನ್ನು ಜಾರಿಗೆ ತಂದಿರುತ್ತದೆ.
    - ಮಹಿಳಾ ಪ್ರಯಾಣಿಕರ ಸಬಲೀಕರಣಕ್ಕೆ ಸಂಸ್ಥೆಯು ಹೆಚ್ಚು ಒತ್ತು ನೀಡುತ್ತಿದ್ದು, ನಿರ್ಭಯ ಯೋಜನೆಯ ಅಡ್ಡಿಯಲ್ಲಿ ಮಹಿಳೆಯರಿಗೆ ಭಾರಿ /ಲಘು ವಾಹನ ಚಾಲನೆಯ ಬಗ್ಗೆ ತರಬೇತಿ ಹಾಗೂ ಪರವಾನಗಿ ನೀಡಲಾಗುತ್ತಿರುತ್ತದೆ.
    - ಪಿಂಕ್ ಸಾರಥಿ ಗಸ್ತು ಪಡೆಯನ್ನು ಸಹ ನಿಯೋಜಿಸಿ ಮಹಿಳಾ ಪ್ರಯಾಣಿಕರ ಸುರಕ್ಷತೆಗೆ ಆದ್ಯತೆ ನೀಡಲಾಗುತ್ತಿದೆ.
    - 1000 ವಾಹನಗಳಲ್ಲಿ ಸಿ.ಸಿ.ಟಿ.ವಿ ಅಳಡಿಕೆ
    - ಲಿಂಗ ಸಂವೇದನ ಮತ್ತು ಮಹಿಳಾ ಪ್ರಯಾಣಿಕರ ಸುರಕ್ಷತೆಯ ಬಗ್ಗೆ ಚಾಲನಾ ಸಿಬ್ಬಂದಿಗಳಿಗೆ ತರಬೇತಿ ಕಾರ್ಯಕ್ರಮ
    - ವಿಶೇಷವಾಗಿ ಮಹಿಳಾ ಪ್ರಯಾಣಿಕರಿಗೆ ಪ್ರಮುಖ ಬಸ್ ನಿಲ್ದಾಣಗಳಲ್ಲಿ ವಿಶ್ರಾಂತಿ ಕೊಠಡಿಗಳ ವ್ಯವಸ್ಥೆ ಕಲ್ಪಿಸಲಾಗಿರುತ್ತದೆ.
    - ನಿಲ್ದಾಣಗಳಲ್ಲಿ ಪಿ.ಐ.ಎಸ್ ಬೋರ್ಡ್ ಅಳವಡಿಕೆ

- **ಸಮೂಹ ಸಾರಿಗೆ ಬಳಕೆ:**
    - ಟ್ರಾಫಿಕ್ ಸಂಯೋಗವನ್ನು ಕಡಿಮೆ ಮಾಡವ ನಿಟ್ಟಿನಲ್ಲಿ, ವಾಯು ಮಾಲಿನ್ಯ ತಡೆಗಟ್ಟಲು, ಒತ್ತಡದ ಚಾಲನೆಯಿಂದ ಮುಕ್ತಿಗೊಳ್ಳಲು.

**ಪ್ರವೇಶಾತಿಗಳನ್ನು ಕಳುಹಿಸುವ ಬಗ್ಗೆ:**
ಪ್ರವೇಶಾತಿ ಮತ್ತು ಕಿರುಚಿತ್ರಗಳನ್ನು ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯ **nammabmtc@mybmtc.com** ಇಮೇಲ್-ಗೆ ಕಳುಹಿಸತಕ್ಕದ್ದು.

**ಅರ್ಹತೆ :**
ಈ ಸ್ಪರ್ಧೆಯಲ್ಲಿ ಭಾಗವಹಿಸಲು ಸರ್ವರಿಗೂ ಅವಕಾಶವಿರುತ್ತದೆ.

**ಸಂಪರ್ಕಿಸಿ:-**
**ಸಾರ್ವಜನಿಕ ಸಂಪರ್ಕಾಧಿಕಾರಿ,**
**ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ,**
**ಕೇಂದ್ರಕಛೇರಿ,**
**ಬೆಂಗಳೂರು-27.**
**ದೂ:** 080-22537596
**ಮೊ:** 7760991212
**ಇ-ಮೇಲ್: nammabmtc@mybmtc.com**

# ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ

ಸಾರ್ವಜನಿಕ ಸಂಪರ್ಕ ಇಲಾಖೆ : : ಕೇಂದ್ರ ಕಛೇರಿ : : ಶಾಂತಿನಗರ : : ಬೆಂಗಳೂರು-27

ಮೊಬೈಲ್ ನಂ: **7760991212, ದೂರವಾಣಿ: 080-22537596**

**ಇಮೇಲ್: nammabmtc@mybmtc.com**


---

## ಕಿರುಚಿತ್ರ ಸ್ಪರ್ಧೆಯ ಅರ್ಜಿ ನಮೂನೆ
## (Application Form)

**ಛಾಯಾಚಿತ್ರ**

1. ಹೆಸರು (Name) :

2. ವಿಳಾಸ (Address) :

3. ಇ-ಮೇಲ್ (E-mail) :

4. ದೂರವಾಣಿ ಸಂಖ್ಯೆ (Phone Number ) :

5. ಅನುಭವ (Experience) : 1)

2)

3)

-ಸಹಿ-